ಕಣ್ಣು ಬಂತು ಬೆಳಗು



ರಮಜಾನ
ದರ್ಗಾ

ರಮುಜಾನ ದರ್ಗಾ



"ಕಾವ್ಯ ಬಂತು ಬೀದಿಗೆ" ಈ ಕವಿಯ ಬದುಕಿನ ಪ್ರಯೋಗದ ಫಲವಾಗಿರುವದರಿಂದ ಈತನ ಕಾವ್ಯ ಹಾಗೂ ಈತನನ್ನು ಬೇರ್ಪಡಿಸುವುದು ಸುಲಭ ಸಾಧ್ಯವಿಲ್ಲ. ಏಕೆಂದರೆ ಈತ ತನ್ನ ಕಾವ್ಯವನ್ನು 'ಬದುಕುತ್ತಾನೆ', ಬದುಕನ್ನೇ ಕಾವ್ಯವಾಗಿಸುತ್ತಾನೆ.

ನಮ್ಮ ಸಾಹಿತ್ಯದ ಬಹುತೇಕ ರ್‍ಯಾಡಿಕಲ್ ಕವನಗಳು ಜೀವದಿಂದ ಸ್ಪಂದಿಸುವದಿಲ್ಲ ಎನ್ನುವ ಆಪಾದನೆಗೆ ಅಪವಾದವಾಗಿ ನಿಲ್ಲುತ್ತವೆ ಈ ಕವನಗಳು. ಇವು ರಂಗಮಹಲುಗಳ ನುಣುಪು ಗೋಡೆಗಳಿಂದ ಜಾರಿ ಬಂದವುಗಳಲ್ಲ; ಬೀದಿಯಲ್ಲಿ ಮಾನವೀಯತೆಗೆ ಅಪಮಾನವಾದಾಗ, ನೆತ್ತರು ರೊಚ್ಚಿಕೊಂಡಾಗ ಹುಟ್ಟಿದುವು.

→

ಕಾವ್ಯ ಬಂತು ಬೀದಿಗೆ

ರಮಜಾನ ದರ್ಗಾ

ಯುವಪ್ರಜ್ಞಾ ಪ್ರಕಾಶನ
೧೯೭೮

KĀVYA BANTU BĪDIGE — (Kannada) A collection of poems by Ramjan Abdulsa Darga, M A., Sub-editor, "Krishipete", Vidyanagar Hubli - 580,021. Published by Yuvaprajna Publications, Hubli - 22

Pages VIII + 48

© Ramjan Darga

Cover design : Ramesh Dhanawadkar

First Edition : Oct. 1978

Copies : 1000

Price : **Rs. 6-00**

Printers :

Somashekhar Akalwadi

Manohar Printing Press

Market, Dharwad

ಜಗತ್ತಿನ ಸಮಸ್ತ
ಯುದ್ಧದ್ವೇಷಿಗಳಿಗೆ

"Circling the earth in the orbital spaceship
I marvelled at the beauty of our planet.
People of the world !
Let us safeguard and
enhance this beauty — not destroy it !"

—YURI GAGARIN

ಜನರು ಬೀದಿಯಲ್ಲಿದ್ದಾಗ :
– ರಂಗಮಹಲುಗಳನ್ನೊದ್ದು,
ಕನಸುಗಳ ಕೋಟೆಯನ್ನೊಡೆದು,
ಭ್ರಮೆಯ ಲೋಕವ ದಾಟಿ–
ತಾನೂ ಬದುಕಲೆಂದು
ಕಾವ್ಯ ಬಂತು ಬೀದಿಗೆ.

ನಿವೇದನೆ

ಪ್ರಿಯ ಓದುಗರೇ,

ನಿಮ್ಮ ನೆನಪಾದಾಗಲೆಲ್ಲ 'ನಾನೇಕೆ ಬರೆಯುತ್ತೇನೆ' ಎಂಬುದನ್ನು ತಿಳಿಸಲು ಆತುರತೆಯುಂಟಾಗುತ್ತದೆ. ನನ್ನ ದೇಶ ಅಂಥ ದೇಶಗಳು, ನನ್ನ ಜನರು–ಅಂಥ ಜನರು ಫಕ್ಕನೆ ನೆನಪಾಗುತ್ತಾರೆ. ಹೊಲಗೇರಿಯಿಂದ ಹಿಡಿದು ದಕ್ಷಿಣಾಫ್ರಿಕೆಯವರೆಗೆ ಮನಸ್ಸು ಹರಿಯುವಾಗ; ನಡುವೆ ರೈತರ ಗುಡಿಸಲುಗಳು, ಕಾರ್ಮಿಕರ ಕಾಲೊನಿಗಳು, ಸೂಳೆಗೇರಿಗಳು, ಸುಸಂಸ್ಕೃತರೆಂದೆನ್ನಿಸಿಕೊಳ್ಳುವವರ ಮಹಲುಗಳು, ಉದ್ದಿಮೆಪತಿಗಳ ಕಾರ್ಖಾನೆಗಳು–ಸುಲಿಗೆ ಸಾಮ್ರಾಜ್ಯಗಳು, ರಂಗು ರಂಗಿನ ಕ್ಲಬ್ಬುಗಳು, ಹಾಲು ಕುಡಿಯುವ ನಾಯಿಗಳು, ನೀರೂ ಸಿಗದ ಜನರು, ರಕ್ತ ಬೆವರಾಗುವವರೆಗೆ ದುಡಿದು ಎಲುಬಿನ ಗೂಡಾದವರು, ಎರಡು ಹೊತ್ತಿನ ಊಟವಿಲ್ಲದೆ, ಇರಲು ಸ್ಥಳವಿಲ್ಲದೆ, ಔಷಧಿಗೆ ದುಡ್ಡಿಲ್ಲದೆ ರೋಗದ ಮುದ್ದೆಗಳಾಗಿ ಒದ್ದಾಡುವವರು, ಪ್ರಾಣಿಗಳಂತೆ ನೋವುಂಡು ಬೆಳೆದವರು, ತಾಪಸಾಗರಕ್ಕೆ ಸಹನೆಯ ಆಣೆಕಟ್ಟು ಕಟ್ಟಿದವರು ಎದುರಾಗುತ್ತಾರೆ.

ಈ ನನ್ನ ಜನರಿಗೆ ಬದುಕೇ ಒಂದು 'ಯಾತನಾ ಶಿಬಿರ'ವಾಗಿದೆ. ಇಂದು ಅವರ ಅತೃಪ್ತಿ ಸಹನೆ ಮೀರಿ ಬೆಳೆಯುತ್ತಿದೆ. ಅವರು ತಿನ್ನುವ ಆಹಾರ, ಕೇಳುವ ಅನುಕಂಪದ ಮಾತುಗಳು, ಅವರನ್ನು ನೋಡುವ ಮಾನವೀಯ ಕಣ್ಣುಗಳು ಕೃತ್ರಿಮವಾಗಿವೆ. ಅವರ ಅವಿಶ್ರಾಂತ ದುಡಿಮೆ. ಯಾನೆ, ಸಹತನೆ. ಅವರ ಹೆಪ್ಪುಗಟ್ಟಿದ ಭಾವನೆಗಳು, ನನಸಾಗದ ಕನಸುಗಳು ಜ್ವಾಲೆಗಳಾಗಿ ನನ್ನ ಆತ್ಮಕ್ಕೆ ಬೆಂಕಿಯಿಟ್ಟಂತೆಲ್ಲ ಅದು ಶುದ್ಧವಾಗುತ್ತದೆ—ನಾನು ಮನುಷ್ಯನಾಗುತ್ತೇನೆ.

ನನ್ನ ವೈಯಕ್ತಿಕ–ಸಾಮಾಜಿಕ ದುರಂತಗಳು ಹೆಚ್ಚಾದಂತೆಲ್ಲ ಅವರು ನನಗೆ ತೀರ ಸಮೀಪವಾಗುತ್ತಾರೆ. ಬದುಕಿನ ಬಗ್ಗೆ ಹೆಚ್ಚು ಶ್ರದ್ಧೆಯನ್ನು ಹುಟ್ಟಿಸುತ್ತಾರೆ. ಹೋರಾಟದ ಮಹತ್ವ ವನ್ನು ತಿಳಿಸುತ್ತಾರೆ. ಬದುಕಿನ ಬಗ್ಗೆ ಅವರಿಗಿರುವ ಆದರ ಅಗಾಧವಾಗಿದೆ.

ನನಗೆ ಗೊತ್ತು (ಎಲ್ಲರಿಗೂ ಗೊತ್ತು) ನಾವು ನೋಡು ನೋಡು ತ್ತಿರುವಂತೆಯೆ ಅವರು ಈ ಜಗತ್ತಿನ ಸ್ವರೂಪ ಬದಲಿಸುತ್ತಾರೆ. ನಾವು ಹೀಗೇ ಕವನ ಬರೆಯುತ್ತ, ನ್ಯಾಯಾಧೀಶ– ಐ.ಎ.ಎಸ್ –ಐ.ಪಿ.ಎಸ್ ಆಗಿ ಈ ವ್ಯವಸ್ಥೆಯ ನ್ಯಾಯ–ಅಧಿಕಾರ–ಶಿಸ್ತನ್ನು ಪೋಷಣೆ ಮಾಡುತ್ತ, ಮಂತ್ರಿಗಳಾಗಿ ಈ ವ್ಯವಸ್ಥೆಯನ್ನು ರಿಪೇರಿ ಮಾಡುತ್ತ, ಪ್ರಾಧ್ಯಾಪಕರಾಗಿ–ಸಂಶೋಧಕರಾಗಿ ನಮ್ಮ ಉಚ್ಚ ಸಂಸ್ಕೃತಿಯನ್ನು ಹೊಗಳುತ್ತ ಕಾಲ ಕಳೆಯುತ್ತಿರುವಾಗಲೇ ಅವರು ಮಾನವೀಯ ವ್ಯವಸ್ಥೆಯೊಂದರ ನಿರ್ಮಾಣ ಮಾಡು ತ್ತಾರೆ. ವಿಜಯ ಪತಾಕೆ ಅವರ ತ್ಯಾಗ ಬಲಿದಾನಗಳಿಂದ ಇನ್ನಷ್ಟು ಕೆಂಪಾಗುತ್ತದೆ. ಆ ಮೇಲೆ ನಾವು ನಾಚಿಕೆಯಿಂದ ತಲೆ ತಗ್ಗಿಸಿ ಅವರ ಮತ್ತು ಬದುಕಿನ ಮಹತ್ವವನ್ನು ಅರಿಯುತ್ತೇವೆ.

ಬರವಣಿಗೆ ನನ್ನ ಉದ್ಯೋಗವಲ್ಲ, ಉದ್ಯೋಗವೇನೆಂಬುದನ್ನು ತಿಳಿಸುವಂತಹದು. ನಾನು ನನ್ನ ಬದುಕಿನ ದುರಂತಗಳನ್ನು ನಿಮಗೆಲ್ಲ ತಿಳಿಸಲು ಬರೆಯುತ್ತಿಲ್ಲ. ನನ್ನ ಆತ್ಮಕ್ಕೆ ಹತ್ತಿದ ಬೆಂಕಿಯನ್ನು ನಿಮ್ಮೆಲ್ಲರ ಆತ್ಮಗಳಿಗೆ ಹಚ್ಚುವುದಕ್ಕಾಗಿ ಬರೆಯುತ್ತಿದ್ದೇನೆ.

ನನ್ನ ಕಾವ್ಯಕ್ಕೆ ಉದ್ದೇಶವಿದೆ–ಭವಿಷ್ಯವಿದೆ. ಏಕೆಂದರೆ ಭವಿಷ್ಯದ ವಾರಸುದಾರರು ನನ್ನ ಕಾವ್ಯಕ್ಕೆ ಸ್ಫೂರ್ತಿಯನ್ನಿತ್ತಿದ್ದಾರೆ. ಅಕ್ಷರ ಗಳೊಡನೆ ಅವರ ಸಂಬಂಧ ಹೆಚ್ಚಿದಂತೆಲ್ಲ ನನ್ನ ಮತ್ತು ನನ್ನಂಥವರ ಕವನಗಳು ಇನ್ನೂ ಜೀವ ತುಂಬಿಕೊಳ್ಳುತ್ತವೆ.

—**ರಮಜಾನ ದರ್ಗಾ**

ಕೃತಜ್ಞತೆ

ಬಾಲ್ಯದಲ್ಲೇ ಹೆಚ್ಚು ಹೆಚ್ಚು ಸಂವೇದನಾಶೀಲನಾಗಲು ಕಾರಣವಾದ ನನ್ನೂರಿನ (ವಿಜಾಪುರದ) ಜನಸಮೂಹಕ್ಕೆ, ವಿದ್ಯಾಗುರು ಪ್ರಾ॥ ಎ. ಎಸ್. ಹಿಪ್ಪರಗಿಯವರಿಗೆ, ಕಷ್ಟಪಟ್ಟು ಕಲಿಸಿದ ತಂದೆ–ತಾಯಿ, ಸಹೋದರಿ ಸಹೋದರರಿಗೆ, ಚಿಕ್ಕಂದಿನಿಂದಲೂ ನನ್ನ ಬೆಳವಣಿಗೆಯುಕಡೆಗೆ ಗಮನವಿತ್ತ ಪ್ರಿ॥ ಜಿ. ಬಿ. ಸಜ್ಜನ ಅವರಿಗೆ, ಬದುಕಿನ ತಿರುವಿನಲ್ಲಿ ಬಂದು ಮುಂದೆ ಸಾಗಿಸಿದ ಪ್ರಾ॥ ಬಿ. ಎಸ್. ಸಾರಂಗಮಠ, ಶ್ರೀ ಬಿ. ಆರ್. ಬೀಳಗಿಯವರಿಗೆ, ಹೊಸ ತತ್ವವೊಂದರ ಅರಿವು ಮೂಡಿಸಿದ ಪ್ರಕಾಶ ಒಟ್ಟಿನಹಳ್ಳಿ, ನರಸಿಂಗರಾವ ಕುಲಕರ್ಣಿಯವರಿಗೆ, ಈ ಲೋಕದೊಳಗಿನ ಅನೇಕ ಲೋಕಗಳನ್ನು ತೋರಿಸಿದ ಗೆಳೆಯ ಮಹಾದೇವ ಹೊರಟ್ಟಿಯವರಿಗೆ, ನನ್ನ ಅತ್ಯಂತ ಕಷ್ಟದ ದಿನಗಳಲ್ಲಿ ಹೊಸ ಜೀವನವನ್ನೂ ಆತ್ಮೀಯತೆಯನ್ನೂ ಕೊಟ್ಟ ಶ್ರೀ ಕೆ.ಎಚ್. ರಂಗನಾಥರಿಗೆ, ಅಯ್ಯನಗೌಡ್ರ, ಪ್ರಿ॥ ಬಸವರಾಜ ಹುಂಬರವಾಡಿಯವರಿಗೆ. ಸಂಕಲನಕ್ಕಾಗಿ ಕವನಗಳನ್ನು ಆರಿಸಿ, ಪ್ರಕಟಿಸಲು ಪ್ರೋತ್ಸಾಹಿಸಿದ ಡಾ॥ ಮಲ್ಲಿನಾಥ ಕಲಬುರ್ಗಿಯವರಿಗೆ, ನನ್ನ ಈ ಪ್ರಥಮ ಕವನ ಸಂಕಲನ ಹೊರ ಬರಲು ಪ್ರತ್ಯಕ್ಷ ಇಲ್ಲವೇ ಪರೋಕ್ಷವಾಗಿ ಕಾರಣರಾದ ಎಲ್ಲ ಆತ್ಮೀಯರಿಗೆ ಅಲ್ಲದೆ ಈ ಸಂಕಲನದ ಮುಕ್ಕಾಲುಪಾಲು ಕವನಗಳು ಕೆಂಬಾವುಟ, ಶೂದ್ರ, ಕರ್ಮವೀರ, ಜಯ ಪ್ರಕಾಶ, ವಿಮೋಚನೆ, ಸಂಕ್ರಮಣ ಪತ್ರಿಕೆಗಳಲ್ಲಿ, ಅಂತಾರಾಷ್ಟ್ರೀಯ ಯುವಜನ ಮೇಳ–೭೮ರ ಸ್ಮರಣ ಸಂಚಿಕೆಯಲ್ಲಿ, 'ತಾಪದ ಕಿಡಿ' ಕವನ ಸಂಕಲನದಲ್ಲಿ ಪ್ರಕಟವಾಗಿದ್ದು ಆ ಎಲ್ಲ ಸಂಪಾದಕರಿಗೆ, ಯುವಪ್ರಜ್ಞ ಪ್ರಕಾಶನಕ್ಕೆ, ಅಂದವಾದ ವಿನ್ಯಾಸ–ಮುದ್ರಣಗಳಿಗೆ ಕಾರಣರಾದ ಮುದ್ರಣಾಲಯದ ಕಾರ್ಮಿಕ ಬಂಧುಗಳಿಗೆ ಮತ್ತು ಆ ಕ ಳ ವಾ ಡಿ ಸಹೋದರರಿಗೆ ನನ್ನ ಕೃತಜ್ಞತೆಗಳು.

ಪರಿವಿಡಿ

ಪ್ರಣಾಳಿಕೆ

ನಾವು ದುಡಿಯುವ ಜನ

ನಮ್ಮ ಅಧಿಕಾರ ಬಂದಾಗ :
ಪೋಲೀಸರನ್ನು, ನ್ಯಾಯಾಧೀಶರನ್ನು
ಮನುಷ್ಯರನ್ನಾಗಿ ಮಾಡುತ್ತೇವೆ.

ಟ್ಯಾಂಕುಗಳು ಬುಲ್‌ಡೋಜರ್ ಆಗುತ್ತವೆ
ತಗ್ಗು–ದಿನ್ನೆಯು ನೆಲ ಸಮನಾಗುತ್ತದೆ.

ಬಂದೂಕಿನ ಬಾಯಲ್ಲಿ
ಗುಬ್ಬಿ ಗೂಡು ಕಟ್ಟುತ್ತದೆ.

'ಕೆಂಪುದೀಪ'ದ ಕೆಳಗೆ
ಉದ್ಯಾನವನಗಳೇಳುತ್ತವೆ.

ಒಂದೇ ಒಂದು ಸಲ ಅವಕಾಶ ಸಿಗಲಿ
ಭೂಗೋಳದ ತುಂಬೆಲ್ಲ
ಶಾಂತಿಯ ಬೀಜ ಬಿತ್ತುತ್ತೇವೆ.

ಮುಂದೆ,
ನಮ್ಮ ಮಕ್ಕಳು ಶಬ್ದಕೋಶ ತಿರುವಿ
ವೀರಗಲ್ಲುಗಳ ಅರ್ಥ ಹುಡುಕುತ್ತಾರೆ.

• •

ಫ್ಯಾಸಿಸ್ಟ್

ಫ್ಯಾಸಿಸ್ಟ್
ದೇಶಪ್ರೇಮದ ಬೀಜ ಬಿತ್ತಿ
ಬಾಂಬುಗಳ ಬೆಳೆ ಬೆಳೆದೆ.

ನಿನ್ನ ಪುಂಗಿಯ ನಾದದಿ
ಊರ ಕುರಿಗಳೆಲ್ಲ
ರಣರಂಗ ಸೇರಿದವು.

ಅಂದು,
ನಿನ್ನ ದೈತ್ಯ ಶಕ್ತಿಯನ್ನೆಲ್ಲ
ಬೃಹತ್ ಯುಕ್ತಿಯಿಂದ
ನುಚ್ಚು ನೂರಾಗಿಸಿದೆವು.

ಆದರೆ
ಫ್ಯಾಸಿಸ್ಟ್ ನಮಗೆ ಗೊತ್ತಿದೆ
ನೀನು
ರಕ್ತಬೀಜನ ವಂಶದವ.

ಹುಟ್ಟುತ್ತಿರುವಿ
ಅರೆ–ಗಿರೆ–ಚೂರೆ
ಹಾಗೆಯೆ ಬಿಟ್ಟರೆ ಭಾರೆ

ನೀನು ಶತಾವತಾರಿ
ಹಿಟ್ಲರ್ ಮುಸೋಲಿನಿಯಿಂದ ಹಿಡಿದು

ಫಿನೋಲಿ, ಫ್ರೋಡ್ಸ್
ಖೋಂಡಾಕರ್......

ಮಾನವತೆಯ ಸತ್ವವನು ಹೀರುತ್ತಾ
ಬೆಳೆಯುವ ಪಾರ್ಥೇನಿಯಂ.

ನಿನ್ನ ಆನಂದ ಮಾರ್ಗ
ನಮ್ಮ ಡೋಗಿಗಳಿಂದ ನಿರ್ಮಿತ

ನೀನು "ಆರ್" ಎಂದು
ಕೇಳಿದುದೇ ತಡ
"ಎಸ್" "ಎಸ್" ನಾವು ನಿನ್ನವರೇ
ನಿನ್ನಂಥವರೇ
ಸ್ವಸ್ತಿಕಮಯರು
ಅನ್ನುವ ಶೂರರು,
ರಾಜ ಮಹಾರಾಜರ ರಕ್ಷಕರು
ಅಖಂಡ ಭಾರತದ ನಿರ್ಮಾಪಕರು
"ಮುಸ್ಲೀಮರು ಹೊರಗೆ ಹೋಗಲಿ
ಇಲ್ಲವೆ ಯಜ್ಞ ಮಾಡಲಿ"
ಅನ್ನುವ ಜನಿವಾರ ಧೀರರು
ಈ ಆರ್ಯ ಪುರುಷರು
ನಿನ್ನ ವಂಶಜರು
ಮುನ್ನಡೆದಿದ್ದಾರೆ
ಹಿಡಿದು 'ಜನತಾ ಢಾಲು'

• •

ನ್ಯೂಟ್ರಾನ್ ಬಾಂಬ್

ನ್ಯೂಟ್ರಾನ್ ಬಾಂಬ್
ನ್ಯಾಟೋ ರಾಷ್ಟ್ರಗಳ ಮುಖವಾಣಿ.

ದೊಡ್ಡ ದೊಡ್ಡ ಕಂಪನಿಗಳನ್ನು
ಉದ್ದುದ್ದನೆಯ ಕಟ್ಟಡಗಳನ್ನು
ಹಾಳುಮಾಡುವುದಿಲ್ಲ ನ್ಯೂಟ್ರಾನ್.

ಕಲ್ಲು ಕಲ್ಲಾಗಿಯೇ ಉಳಿಯುತ್ತದೆ
ಮನುಷ್ಯರು ಮಾತ್ರ ಮಣ್ಣಾಗುತ್ತಾರೆ.

ನಮ್ಮ ನಾಗರೀಕತೆ ಹಾಗೇ ಉಳಿಯುತ್ತದೆ
ಇನ್ನೊಂದು ಸಂಸ್ಕೃತಿ ಬರುವವರೆಗೆ.

ನ್ಯೂಟ್ರಾನ್ ಉಸಿರಾಡಿದಾಗೆಲ್ಲ
ನಮ್ಮ ಉಸಿರು ನಿಲ್ಲುತ್ತದೆ.

ನ್ಯೂಟ್ರಾನ್ ನಮ್ಮ ತಲೆ ಸೀಳುವುದಿಲ್ಲ
ಹೊಟ್ಟೆ ಹರಿಯುವುದಿಲ್ಲ
ಅದು ಗೊಬೆಲ್ಸನ ಸತ್ಯದಂತೆ
ನಮ್ಮ ಪ್ರಾಣ ಸವರುತ್ತದೆ.

ನಮ್ಮ ಹೆಣಗಳ ಮೇಲೆ
ವಿಜ್ಞಾನದ ಗೋರಿ ಕಟ್ಟುತ್ತದೆ

ಅದು ನಮ್ಮಿಂದ ಏನನ್ನೂ ಕಸಿದುಕೊಳ್ಳುವುದಿಲ್ಲ
ಚಿಲ್ಲರೆ ಜೀವವೊಂದನ್ನುಳಿದು

ಅದು ಏನನ್ನೂ ಧ್ವಂಸ ಮಾಡುವುದಿಲ್ಲ
ಆದರೆ ತನ್ನ ಮಂಜುದುಟಿಗಳಿಂದ
ನಮ್ಮ ಆತ್ಮಕ್ಕೆ ಮುದ್ದಿಡುತ್ತದೆ.

ಬದುಕಿನ ಮೇಲೆ ಬಲತ್ಕಾರ ಮಾಡುವ
ಚಟಗಾರ್ತಿ, ಈ ನ್ಯೂಟ್ರಾನ್ ರಾಕ್ಷಸಿ
ಸಾಮ್ರಾಜ್ಯಶಾಹಿಗಳ ವಿಷಕನ್ಯೆ.

• •

ಪ್ಯಾಲೆಸ್ತಾನ್ ಅಪಹರಿಸಲ್ಪಟ್ಟಿದೆ

ಯಾಂಕೀ ಜಾತಿಯ
ಭ್ರೂಣಗಳು ಬೆಳೆದಂತೆಲ್ಲ
ಪೃಥ್ವಿಯ ತುಂಬ ಕ್ರೂರ ಗೆರೆಗಳನ್ನು
ಕೊರೆಯಲಾಯಿತು.

ಅವಕ್ಕೆ ದೇಶಗಳ ದಂಡೆಗಳೆಂದು
ಕರೆಯಲಾಯಿತು.

ಮುಂದೆ :
ಭೂಪಟದ ತುಂಬ
ಬಣ್ಣ ಬಣ್ಣದ ತುಕಡಿಗಳು
ಕಿಕ್ಕಿರಿದು ತುಂಬಿದವು.

ಈಗ ಕೇಳುತ್ತೇನೆ
ಎಲ್ಲಿ ಆ ಪ್ಯಾಲೆಸ್ತಾನ್ ತುಕಡಿ ?

ಹೇಳಿ ಅಮೇರಿಕನ್ನರೇ !
ನಿಮ್ಮೆಲ್ಲ ಗ್ಲೋಬುಗಳನ್ನು
ತಿರುವಿ ನೋಡಿದೆ.
ಆ ಚಿನ್ನದ ತುಕಡಿಯಿಲ್ಲ,
ಆ ಶಾಂತಿಯ ಬಣ್ಣವಿಲ್ಲ.

ಹೇಳಿ
ಜ್ಯೂಗಳೊಡೆಯರೇ ಹೇಳಿ !

ಎಲ್ಲಿ ಮಾಯವಾಯಿತದು ?
ನಿಮ್ಮ ಚಿಕ್ಕ ಚುಕ್ಕೆಗಳೂ ಕಾಣುತ್ತಿರುವಾಗ
ಆ ತುಕಡಿ ಎಲ್ಲಿ ?

ಹೇಳಿ ! ಹೇಳಿ !
ಹೇಳದಿದ್ದರೆ ಇಡೀ ಪೃಥ್ವಿಗೇ
ಪ್ಯಾಲೆಸ್ತಾನ್ ಎಂದು ಕರೆಯುವೆ !!

• •

ಸಾಗಿದ್ದಾರೆ

ನಡೆದಿದ್ದಾರೆ ಗುರಿಯೆಡೆಗೆ ಗುರಿಯಿಟ್ಟು
ಕಳೆದುಕೊಳ್ಳಲು ಏನೂ ಇಲ್ಲ ಅವರಿಗೆ
ಬಾನು–ಭೂಮಿ, ಚಂದ್ರ–ಸೂರ್ಯ
ಹಿಮದ ಕಲ್ಲು–ಕಾಮನ ಬಿಲ್ಲು
ಕಳೆದುಕೊಳ್ಳುವಂತಹವಲ್ಲ ಇವೆಲ್ಲ.

ಏಸು ತನ್ನ ಶಿಲುಬೆಯನ್ನು ಹೊತ್ತಂತೆ
ಇದ್ದ ಬದುಕನ್ನೇ ಹೆಗಲಿಗೇರಿಸಿದ್ದಾರೆ
ಸಂಕೋಲೆಗಳನ್ನು ಕರಗಿಸಿ ಖಡ್ಗ ಮಾಡುವ
ದಿನಗಳೆಡೆಗೆ ಸಾಗಿದ್ದಾರೆ ಭರದಿಂದ
ನಾವು ಬದುಕಲೆಂದು ಸಾಗಿದ್ದಾರೆ ಭರದಿಂದ.

• •

ದರ್ಶನ

ನಿರಾಶೆಯ ಬುಟ್ಟಿಯಲ್ಲಿ
ಮುದ್ದೆಯಾಗಿ ಬಿದ್ದಿರಲು
ಸಾರ್ತ್ರೆ ಅಂದನು :
"ಸಣ್ಣ ಜಗದಿ
ದೊಡ್ಡ ಹೃದಯ
ಅದು ಹೇಗೆ ಬದುಕೀತು ?
ನಿನ್ನ ಬದುಕು ನಿನ್ನ ಕೂಡ
ಅದು ನಿನ್ನ ಅಸ್ತಿತ್ವ.

ನಿನ್ನೆಯ ಸಮಾಜವೇ ಇಂದಿದೆ
ಇದುವೆ ನಾಳೆಯಿರುವುದು.

ಇಲ್ಲಿ
ಹುಟ್ಟಿದುದೇ ವಿಚಿತ್ರ
ಹಾಗೆಯೆ ಸಾಗಿರುವೆವು
ಸಾವಿನ ಅಪ್ಪುಗೆಯೆಡೆಗೆ.

ಸಾವಿರಾರು ಚಿಂತೆಗಳಲಿ
ಮುಳುಗಿರಲು ನಾವು
ನೂರೆಂಟು ಬಂಧನದಿ
ಸಿಲುಕಿರಲು ನಾವು
ದುಃಖದ ಹೊರೆಯನ್ನು
ಹೊತ್ತಿರಲು ನಾವು

ಸಾವು ಬಂದಪ್ಪುವದು
ಕಂಗೆಟ್ಟ ಶಿಶುವನ್ನು
ತಾಯಿ ಅಪ್ಪುವ ತೆರದಿ."

ಜೋಮು ಬಂದಿತು ನನಗೆ
ಸಾರ್ತ್ರನೀ ಮಾತುಗಳಿಂದ.

ಕಣ್ಬಿಟ್ಟು ಕೈ ಚಾಚಿ
ಬಂದೆನ್ನ ಹಿಡಿದೆಬ್ಬಿಸಿ
ಹೇಳಿದನು ಮಾರ್ಕ್ಸ :
"ಗೆಳೆಯನೇ ನೋಡಲ್ಲಿ
ಸಾರ್ತ್ರನಾ ಮರಿಗಳನು,
ಪಲಾಯನದ, ನಿರಾಶೆಯ
ವ್ಯಕ್ತಿಗತವಾದಿಗಳನು,
ತಿರುವಲಿಚ್ಛಿಸರು
ಇತಿಹಾಸದ ಪುಟಗಳನು,
ಇವರ ತಲೆಯಲ್ಲಿ
ಬರೀ 'ಅನಾಥ ಪ್ರಜ್ಞೆ'.

ನೋಡಲ್ಲಿ
ಇತಿಹಾಸದ ಪುಟಗಳನ್ನು
ನಿರಂತರ ಬದಲಾವಣೆಯ
ಸಂಕೇತಗಳನ್ನು.

ನೋಡು ಪ್ಯಾರಿಸ್ ಕಮ್ಯೂನ್
ಅದರ ಫಲ ನೋಡು ಅಕ್ಟೋಬರ್ ಕ್ರಾಂತಿ"

ಅಗೋ ಮತ್ತಾರದೋ ಹೆಜ್ಜೆ...
ಆದರೂ ಕೇಳಿಸುತ್ತಿದೆ ಧ್ವನಿ
ಮಾರ್ಕ್ಸ, ಮಾರ್ಕ್ಸ, ಮಾರ್ಕ್ಸ...

• •

ಕಾವ್ಯ-ಬದುಕು

ಇದು ಬದುಕಿನಂಗಡಿಯ
ಷೋ-ರೂಂ ಸ್ವಾಮಿ.

ಇಲ್ಲಿ ನೋಡುವುದಕ್ಕೆ
ದಿಟ್ಟಿಸಿ, ಪರೀಕ್ಷಿಸಿ
ತಾಳೆ ಹಾಕುವುದಕ್ಕೆ
ನಿಮಗಿಷ್ಟವಿದ್ದಷ್ಟು ಅವಕಾಶ.

ಆದರೆ ನೇರ ದಾರಿಯಿದೆ
ಬದುಕಿನಂಗಡಿಗೆ.

ಅಲ್ಲಿ ಎಲ್ಲ ವಸ್ತುಗಳಿಗೂ
ಒಂದೇ ಬೆಲೆ – ಅನುಭವ.

ಅಲ್ಲಿ ಕೊಂಡಷ್ಟೂ ಖುಷಿ
ಆದರೆ ಎಚ್ಚರ !
ಗೆಲಿಲಿಯೊ ಹೇಳುವನು ಹುಸಿ
ಮುಖವಾಡಿಗಳ ಸ್ವಾರ್ಥಕ್ಕಂಜಿ.

ಹಿಟ್ಲರನ ಕೌಂಟರಿನಲ್ಲಿ
ಸಾವು ದುಡ್ಡಿಗೆ ಸವ್ವಾಸೇರು.

ಪಕ್ಕದಲ್ಲೇ ಯಾಂಕಿಗಳ ಹುಸಿನಗೆಯಿದೆ.
ಆಫ್ರಿಕನ್ನರ ಅಳಲಿನ ಮೇಲೆ

ಸ್ವಾತಂತ್ರ್ಯದ ಸಸಿಯಿದೆ.
ಮುಂದೆ ಬಂದರೆ
ಭಾರತಾಂಬೆಯ ಚಿಂತೆಯಿದೆ.

ನೀವು ಒಳ ಹೊಕ್ಕರೆ
'ಯುರೇಕಾ' ಪಕ್ಕದಲ್ಲೇ ಸುಳಿದಾಡುವಳು.

ಇವೆಲ್ಲ ಅರ್ಥವಾಗದಿದ್ದರೆ
ಹೋರಾಟದ ಅಂಗಳದಲ್ಲಿ
ಮಾರ್ಕ್ಸ್ ನಿಂತಿದ್ದಾನೆ
ತನ್ನ ಗೆಳೆಯರೊಂದಿಗೆ.

• •

ಬೇಕಪ್ಪಾ ಬೇಕು

ಬಯ್ಲಾಡಿಲ್ ಬಯಲಾಗಿಲ್ಲ – ಬೆಲ್ಚಿ ಮರೆಯಾಗಿಲ್ಲ
ಕಾನ್‌ಪುರದ ಮಿಲ್ಲೊಂದರಲ್ಲಿ ನೂಲು ಕೆಂಪಾಯಿತು.
ಪಂತನಗರಕ್ಕೆ ಕುಲಕ್ಕರ ಸವಾರಿ–ಹೆಣಗಳಿಗೆ ರಹದಾರಿ.

ಬಿರ್ಲಾನ ತೋಳಗಳು ತೃಪ್ತಿಹೊಂದುವ ವರೆಗೆ
ಪೋಲೀಸ್ ನಾಯಿಗಳಿಂದ ಗುಂಡಿನ ಸುರಿಮಳೆ
ಕಾರ್ಮಿಕರ ನೆತ್ತರದಲ್ಲಿ ಹರಿಹರ ನುಡಿಸಿತು ರುದ್ರವೀಣೆ.

ಜೀವರಾಶಿಯ ರಕ್ತಸಾಗರದ ಅಲೆಗಳು
ಒಂದೇ ಸಮನೆ ಬಡಿಯುತ್ತಿವೆ ನಮ್ಮಾತ್ಮಗಳಿಗೆ
ಇದ ಕಂಡು ಚರಣನ ಹರಣ ಬಡಬಡಿಸಿತು.

ರಕ್ತದಾರತಿಗೊಬ್ಬಳಿದ್ದಳು – ಕೀರ್ತಿಗೆಷ್ಟೋ ಜನ
ಇದು ದೇಶಕ್ಕೆ ಎರಡನೇ ಸ್ವಾತಂತ್ರ್ಯ !
ಬೇಕಪ್ಪಾ ಬೇಕು ನಮಗೆ ಮೂರನೇ ಸ್ವಾತಂತ್ರ್ಯ.

• •

ಒಂದು ಗಿಡದ ಆತ್ಮಕಥೆ

ನಾನು ಭೂಜ.
ನನ್ನ ಕಾಂಡ
ಇಪತ್ನಾಲ್ಕು 'ವಾರ್ಷಿಕಸುತ್ತು'–
ಗಳನು ಹೊತ್ತು ನಿಂತರೂ
ನಾ ಬೆಳೆದಿಲ್ಲ
ಬೆಳೆಯಲಿಚ್ಛಿಸುತ್ತಿದ್ದೇನೆ.

ತರ ತರದ ಸ್ತರಗಳಲ್ಲೆಲ್ಲ
ಬಿಟ್ಟ ಬೇರುಗಳಿಂದ ಹೀರಿ
ನೆರೆಯಬೇಕೆನ್ನುತ್ತೇನೆ.

ಹೂತ ಕಣಸುಗಳನ್ನೆಲ್ಲ ಹೊರಸೂಸಿ
ಹೂವಾಗಿಸುವ ಹೊಣೆ ಹೊತ್ತಿದ್ದೇನೆ.
ಆದರೆ ಒಣಗುತ್ತ ಸಾಗಿದ್ದೇನೆ.

ಅಂಗಾರಾಮ್ಲ ಸೇವಿಸಿ
ಪ್ರಾಣವಾಯು ಬಿಡಬೇಕೆಂದರೆ
ಪ್ರಾಣವೇ ಹೋಗುತ್ತಿದೆ ಉಸಿರುಗಟ್ಟಿ.

ಬಿಸಲಿನ ಬೇಗೆಯಾದವರಿಗೆ
ತಂಪನೆರೆಯಬೇಕೆಂದರೂ
ಕೊರೆಯುವ ಚಳಿಯಲ್ಲಿಯೆ
ಬೆವರುವ ಸ್ಥಿತಿಯಲ್ಲಿದ್ದೇನೆ.

• •

ದಿನಚರಿ

ಮುಂಜಾವಿನಿಂದ ಸಂಜೆಯವರೆಗೂ
ಕುದುರೆಮನವನು ಹತ್ತಿ
ಸುತ್ತುತ್ತಲೇ ಇದ್ದೇನೆ.

ಹಗಲು ಕಂಡ ಬೇತಾಳಗಳನೆಲ್ಲ
ಇಡೀ ರಾತ್ರಿ ಹೆಗಲಿಗೇರಿಸುತ್ತ
ಕೇಳಿದ ಪ್ರಶ್ನೆಗಳಿಗೆ ಉತ್ತರಿಸದೆ
ಕುಸಿಯುತ್ತಲೇ ಇದ್ದೇನೆ.

ಸಮಸ್ಯೆಗಳ ಮಡಿಲಲ್ಲೂ
ಕಂಡ ಕಂಡವರಿಗೆಲ್ಲ ಹಲ್ಲು
ಕಿಸಿಯುತ್ತ,
ಬದುಕಬೇಕೆಂದು
ಅವನಿಗೂ ಇವನಿಗೂ
ಕೈ ಮುಗಿಯುತ್ತ – ಸಾಯುತ್ತ
ಸಾಗುತ್ತಿದ್ದೇನೆ.

ನನ್ನಂತೆಯೆ ಇರುವ
ನಿಮ್ಮೆಲ್ಲರ ಮಧ್ಯ
ನನ್ನನ್ನೇ ಹುಡುಕುತ್ತ
"ನೀವು ಕಂಡಿರಾ. ನೀವು ಕಂಡಿರಾ"
ಎಂದು ಹಲಬುತ್ತಿದ್ದೇನೆ.

• •

ನಿಮ್ಮನ್ನು ಮರೆಯುವ ದಿನ

ನಾಕು ದಿನ
ನಾ ನಿಮಗೆ
ಸಿಸ್ಟರ್ ಅಂದದ್ದು.

ಆದರೆ
ನನ್ನಂತಹ
ನೆನಪು ಹಿಡಿಯದವರಿಗಾಗಿ
ನೀವು
ದುಡಿದದ್ದು
ಅನಂತ ದಿನ.

ಮುಂದೆ :
ನಿಮ್ಮ ತ್ಯಾಗದ ಮೇಲೆ
ನಮ್ಮ ಭಾಗ್ಯ ಕುಣಿಯುವ ದಿನ
ಅದೇ
ನಿಮ್ಮನ್ನು ಮರೆಯುವ ದಿನ.

• •

ಮಾಂತ್ರಿಕ

ಲೆನಿನ್
ಸೈಬೇರಿಯದ
ಮರಳಿನಲ್ಲಿ
ಕೆಂಪು ಚಂಪಕವ
ಅರಳಿಸಿದ ಮಾಂತ್ರಿಕ.

ಅದ ತಂದು
ಬತ್ತಿದೆದೆಯಲ್ಲಿ
ಬೆಳೆಯುವ
ಕುಶಲತೆಯ
ತೋರಿದವ.

ಅದರ ವಾಸನೆಯೊ
ಕಡು ಉಗ್ರ.

ಜೀವನವಿಡೀ
ರಸ ಹೀರಿ
ಹಿಪ್ಪಿ ಮಾಡುವ
ಕಪ್ಪೆದೆಯ ಭ್ರಮರಗಳು
ಇದ ಕಂಡು
ಓಡುವವು ದಿಕ್ಕಾಪಾಲಾಗಿ.

ಅಂತೆಯೆ
ವನವಾಗುತ್ತಿದೆ
ಜಗವೆಲ್ಲ
ಕೆಂಪು ಚಂಪಕದ.

• •

ಸವ್ಯಸಾಚಿ

ಹರಿದ ಚಪ್ಪಲಿಗಳನ್ನು
ಮೋಚಿಯು ಮುಂದಿಟ್ಟು
ನಿಂತೆ, ಹೊಲಿಯತೊಡಗಿದ.

ಬಾಗಿದ ಬೆನ್ನು
ಮುದುಡಿದ ತೊಗಲು,...

ಚಿಂತಿಸಿದಷ್ಟೂ ಅನುಕಂಪ.
ಅವನ ಕಣ್ಣಲ್ಲಿ ಕಣ್ಣಿಟ್ಟು ನೋಡಿದೆ.

ಅಂತರಂಗದಲ್ಲಿ–
ಸಾವಿನಾಳದ ಮೇಲೆ ಹರಿದು,
ಸೆಲೆಯೊಡೆದು,
ತೇಲುತ್ತಿರುವ–ಬದುಕನ್ನು
ಹೊಲಿಯುತ್ತಿದ್ದ ಮೋಚಿ
ಸವ್ಯಸಾಚಿ.

• •

ಯುವಗೀತ

ಅಲ್ಲಿ
ಜಲಪಾತ–
ವಾಗುವಲ್ಲಿ
ವಿದ್ಯುತ್
ಹಿಡಿಯ ಹೊರಟವರೇ

ಇಲ್ಲಿ
ವಿದ್ಯುತ್–
ಪಾತವಾಗುತ್ತಿದೆ
ನಮ್ಮ ಚೈತನ್ಯದ.
ನೋಡಿ
ಹೀಗೆಯೆ ಬಿಟ್ಟರೆ
ನಾಳೆ
ಕೊಚ್ಚಿ ಹೋದೀರಿ !

• •

ಯುದ್ಧಬೀರುಗಳು

ಯುದ್ಧಬೀರುಗಳು
ಶತ ಶತಮಾನಗಳಿಂದಲೂ
ಬೆಳೆಯುತ್ತಲಿದ್ದಾರೆ.

ಒಂದೆರಡಾಂಶ್ ಇದ್ದವರು.
ಒಂಬತ್ತು ಹದಿನೆಂಟಾಂಶ್ ಆಗಿದ್ದಾರೆ.

ಅವರಿಗೆ
"King's Clothes" ದಾಂತಹ
ಸುಂದರ ಸಂಸ್ಕೃತಿಯ
ಹೊದಿಕೆಯಿದೆ.

ಅಂದು :
ಭಲ್ಲೆ ಭರ್ಚಿಗಳಿಂದ
ಕೊಲ್ಲುತ್ತಿದ್ದ ಅವರು

ಇಂದು :
ಬರಿ ಅಣುವಿನಿಂದ
ಅಸು ನೀಗಿಸುತ್ತಾರೆ.

ಅಂತೆಯೆ ಅವರು
ಪ್ರಾಣಗಿಂತಲೂ ಮಿಗಿಲು.

• •

ಅಳಲು

ಗಂಡ :
ಯುದ್ಧಕ್ಕೆ ಹೋದವ
ಮರಳಿ ಬರಲಿಲ್ಲ.

ಮಗ :
ರಾತ್ರಿ ಕಂಡ ಚುಕ್ಕೆಗಳನ್ನು
ಹಗಲು ಎಣಿಸುತ್ತಾನೆ.

ಮಗಳು :
ಉಳ್ಳಾಗಡ್ಡಿ ಓಣಿಯಲ್ಲಿ
ಪರಿ ಬಿಚ್ಚುತ್ತಾಳೆ.

ನಾನು :
ಹೇಳಬೇಕೆಂದರೆ
ಧ್ವನಿಗೆ ಕ್ಯಾನ್ಸರ್ ಆಗಿದೆ.

● ●

ನಿನ್ನ ನೆನಪು

೧

ನಿನ್ನ ನೆನಪಿನ ಮೇಲೆ
ಬಾಂಬುಗಳ ಮಳೆಗರೆಯಲು
ಯುದ್ಧ ಬಣದ ಮಧ್ಯ ಸೇರಿದೆ.

ಲೆಫ್ಟ್–ರೈಟಿನ ಶಿಸ್ತಿನಲ್ಲೂ
ನಿನ್ನ ನೆನಪು ವಾಲುತ್ತಿತ್ತು......

ಹಿಮಗಿರಿಯ ಕಂದರಕೆ ಕಳಿಸಿದರು
ಗಡಗಡನೆ ನಡುಗಿಸುವ ಚಳಿಯಲ್ಲಿ
ನಿನ್ನ ನೆನಪನ್ನೇ ಹೊದ್ದು
ಗಡಿಯ ಕಾಯ್ದೆ.

ಯುದ್ಧ !
ಭಯಂಕರ !!
ಸುತ್ತೆಲ್ಲ ಸತ್ತರು.

ನನಗೋ
ಮೈತುಂಬ ಗಾಯಗಳು
ಸಕಲ ಸನ್ಮಾನಗಳೊಂದಿಗೆ
ಮನೆಗೆ ಕಳಿಸಿದರು.

ಕುಂಟುತ್ತ ಬರುವಾಗ
ನಿನ್ನ ನೆನಪು ಕೋಲಾಯಿತು.

ಹೊಟ್ಟೆಗಾಗಿ ಹೋದವರ ಬಟ್ಟೆ ಬಂದಾಗ
ಹೆತ್ತವರ ಒಡಲಲ್ಲಿ 'ಬೆಂಕಿಬಾಂಬು' ಬಿತ್ತು.

೨

ಊರು ಹೊಕ್ಕ ಹೊಸದರಲ್ಲೇ
ಚಂಡಮಾರುತ ಬಂದ
ಜೀವ ಜೀವಗಳನ್ನೆಲ್ಲ ಕೊಂಡೊಯ್ದ.

ನನ್ನ ಜನರು
ಚಂಡಮಾರುತನನ್ನೇ
ತಿರುವಿ ಹಾಕುವ ಉತ್ತುಂಗ
ಮಹಲು–ಮಂದಿರ ಮಸಿದೆ–ಚರ್ಚು...
ಗಳನ್ನೆಲ್ಲ ಕಟ್ಟಿದ ಜನರು

ಆಶ್ರಯವಿಲ್ಲದೆ
ಹೆಣಗಳಾದರು–ಕೊಳೆತರು–ನಾರಿದರು.

ಇದ ಕಂಡು
ಬೆಚ್ಚಗಿದ್ದವರೂ ಅತ್ತರು ಮತ್ತು
ಪರಿಹಾರಧನವೆತ್ತಿ ಮನೆಗೆ
ಹೋದರು.

'ತಮಸೋಮಾ...' ಅನ್ನುವವರು ಬಂದರು
'ಕನ್‌ಫೆಶನ್' ಶುರುವಾಯಿತು
'ಅಲ್ಲಾ ಹೋ ಅಕ್ಬರ್' ಮುಗಿಯಿತು.

ಇಬ್ಬಣದ
ರಾಜಕಾರಣಿಗಳೂ ಬಂದರು
ಹೆಣದ ಗುಡ್ಡಗಳನ್ನೆಲ್ಲ ಹತ್ತಿ
'ಸಂಜೀವಿನಿ'ಗಾಗಿ ಹೊಡೆದಾಡಿದರು.

ನಾನಿಲ್ಲಿ ಹೀಗೆಯೆ
ಈ ಪೂರದಲ್ಲಿ ಹರಿಯುತ್ತ
–ನಿನ್ನ ನೆನಪಿನ ಮೇಲೆ ತೇಲುತ್ತ–
ಹೊರಟರೂ
ಮನದ ಕ್ಯಾಮರಾ ಮಾತ್ರ
ಕ್ಲಿಕ್ಕಿಸುತ್ತಲೇ ಇರುವೆ.

• •

ಜನಾರಣ್ಯ

ಜನಾರಣ್ಯದ
ಈ ನಿಬಿಡ ಪ್ರದೇಶದಲ್ಲಿ
ಜನರು,

ತಮ್ಮ ಫಲಗಳನ್ನೆಲ್ಲ
ತಿಂದು ತೇಗುವ
ಮಂಗಗಳನು ಮರೆತು,

“ನಾವು ಗಿಡಮನುಷ್ಯರು
ನಮಗೇಕೆ ಪರರ ಚಿಂತೆ”
ಎಂದು ಇದ್ದಲ್ಲಿಯೇ ಇದ್ದು
ಬಾಳು ಬರಡಾದರೂ,

ಮಂಗಗಳ ರಾಣಿಗೆ
ಜಯ ಜಯಕಾರ ಹಾಕುತ್ತ,

ಪಂಚವಾರ್ಷಿಕ ಯೋಜನೆಗಳ
ಪಂಚಾಂಗವನ್ನೇ ನೋಡುತ್ತ,

ನಿದ್ರಾ ಜೀವನದಲ್ಲಿ
ಮೂವತ್ತು ಮೂರು ಕೋಟಿಯಿಂದ
ಅರವತ್ತೆರಡು ಕೋಟಿಯಾದರೂ

ಬಸ್ ತಪ್ಪಿಸಿಕೊಂಡ
ಪ್ರಯಾಣಿಕನಂತೆ
ಯೋಚಿಸುವುದನ್ನು ಬಿಟ್ಟಿಲ್ಲ.

• •

ನನಗೆ ಗಾಂಧಿ ಆಗುವ ಇಚ್ಛೆ

ಬಹಳ ದಿನಗಳಿಂದಲೂ
ನನಗೆ ಗಾಂಧಿ ಆಗುವ ಇಚ್ಛೆ.

ಮೊನ್ನೆ
ನಮ್ಮ ಕಾಲೇಜಿನ
ಗ್ಯಾದರಿಂಗ್ನಲ್ಲಿ
ಗಾಂಧಿಯಂತೆ
ಭಾಷಣ ಮಾಡುವಾಗ
ತುಂಡು ಬಟ್ಟೆ ತೊಟ್ಟು,
ತಲೆ ಬೋಳಿಸಿಕೊಂಡು,
ZERO ಕನ್ನಡಕ ಧರಿಸಿದ್ದೆ.

ಆಗ,
ಎದುರಿಗೆ ಕುಳಿತ
ಕ್ಲಾಸ್‌ಮೇಟ್ ಕಸ್ತೂರಿ
ಕಿಸ್ಸೆಂದು
ಉಳಿದವರಿಗಿಂತಲೂ
ಹೆಚ್ಚು ನಕ್ಕಾಗ
ಮನದಲ್ಲಿ ಕಸಿವಿಸಿ.

ಭಾಷಣ ಮುಗಿದಾಗ,
ಪ್ರೊಫೆಸರರೊಬ್ಬರು
“ನೀನು ಫ್ಯಾನ್ಸಿ–

ಡ್ರೆಸ್ಸಿನಲ್ಲಿ ಹೆಸರು
ಕೊಟ್ಟಿದ್ದರೆ ಚೆನ್ನಾಗಿತ್ತು"
ಎಂದರು.

ಅಂದಿನಿಂದಲೂ
ನನಗೆ ನಾನಾಗುವ ಇಚ್ಛೆ.

ಏ ದೆಹಲಿ !

ಚಿಂದಿಯುಟ್ಟು, ಹೊಟ್ಟೆಗೆ ಕಟ್ಟಿ ಹಸಿವಿನ ಗಂಟು
ಬದುಕಿನುದ್ದಕ್ಕೂ ಪರದೇಶಿಗಳಂತಿರುವಾಗ
ಏ ದೆಹಲಿ ನೀನೇ ಹೇಳೇ, ನಿಜ ಹೇಳೇ
ಉಳಿಯುವದೇ ನಿನ್ನೊಡನೆ ನಮ್ಮ ನಂಟು ?

ನಿನ್ನ ಎತ್ತರದ ಮಿನಾರುಗಳಿಂದ
ಜಂತರ–ಮಂತರದ ತಂತ್ರದಿಂದ
ಚಾಂದನೀ ಚೌಕದ ಕೊಳಕಿನಿಂದ
ಬೆರಗುಗೊಳಿಸಲಾರೆ ನಮ್ಮನು.

ನಿನ್ನ ಚಳಿಗೆ ಬೆದರೆವು ನಾವು.
ನಿನ್ನ ಬೇಸಿಗೆಗೆ ಬೆವರೆವು ನಾವು.
ಅಂಜೆವು ತುರ್ಕಮನ್ ಗೇಟಿನ ಏಟಿಗೆ.
ಲಗ್ಗೆಯಿಡುವೆವು ನರಕದ ಕೋಟೆಗೆ.

ನಿನ್ನ ಚದುರಂಗದಾಟ ನಡೆಯದಿನ್ನು.
ನಮ್ಮ ಆಸೆಯ ಚಿಗುರು ಚಿವುಟುವ
ಪ್ರಜಾಪ್ರಭುತ್ವದ ಪ್ರಭುಗಳೊಡನೆ
ಚಕ್ಕಂದವಾಡುವ ಚದುರೆ ನೀನು.

ಅಂತಃಪುರದಿಂದ ಜನಾಸಖಾನೆಗಿಳಿದವಳೇ
ಬಿಳಿಯರು ಬಂದಾಗ ಬೆಳ್ಳಗಾದವಳೇ
ಏ ಗರತಿ ಒಂದಿಷ್ಟು ಹೊರಳಿ ನೋಡೇ
ರಕ್ತ–ಬೆವರು ಸುರಿಸಿ ನಿನ್ನ ಬೆಳೆಸಿದವರ.

ಬೇರು ಬಿಟ್ಟಿದೆ ಸ್ವಾತಂತ್ರ್ಯಗಂಬ
ನಮ್ಮ ರಕ್ತಕೋಟೆಯಲ್ಲಿ
ನೋಡಲ್ಲಿ ಅಶೋಕ ಚಕ್ರ–
ಸದಾ ತಿರುಗುತ್ತಿದೆ ಕಾಲಚಕ್ರ.

● ●

ವಿಪ್ಲವಿ

ವಿಪ್ಲವಿ ನಾನು
ದಿಟ್ಟ ಹೆಜ್ಜೆಯನ್ನಿಟ್ಟಲ್ಲೆಲ್ಲ
ಮುದ್ದೆಯಾಗುತಿಹುದೀ
ಕಾಳ ಜಗತ್ತು.

ನಮ್ಮ ಬಾಳಿಗೆ
ಮುಸಿಯುನುಗ್ಗಿ
ನುಂಗಲೆತ್ನಿಸುವ
ಪುರಾಣ, ಡಂಬ, ನೇಮ
ಜಾತಿ, ಮತ, ಪಂಥ
ಮೇಲು, ಕೀಳು
ಇಂತೀ ಇಂತೀ
ಅಷ್ಟಪದಿಗಳ
ಬಿಗಿ ಹಿಡಿತವನು
ಚೆಲ್ಲಾಪಿಲ್ಲಿಯಾಗುವಂತೆ
ಕಡಿದು,

ತೆರೆದು ಬಾಯನು
ಜ್ವಾಲಾಮುಖಿಯಾಗಿಸಿ
ಸ್ವರ್ಗ–ನರಕಗಳ
ಸುಡುತಿರುವೆ

ದಲಿತರ ಕಣ್ಣೀರು
ನನ್ನೆದೆಯಾಳದಲಿ ಇಳಿದು
ಕತಕತನೆ ಕುದ್ದು
ಲಾವಾರಸವಾಗಿ ಉಕ್ಕಿ

ಈ ಏನೆಲ್ಲವನ್ನೂ
ಏನಿಲ್ಲದಂತಾಗಿಸುತ್ತದೆ.

• •

ಬುರ್ಖಾಗಳು

ಅಲ್ಲಲ್ಲಿ,
ಜನಜಂಗುಳಿಯಲ್ಲಿ,
ಸಿನೇಮಾಗಳ ಮುಂದೆ,
ಬಸ್ ಸ್ಟಾಪುಗಳ ಮಧ್ಯ,
ಹೂವಿನಂಗಡಿಗಳ ಅಕ್ಕಪಕ್ಕ,
ಸ್ಕೂಟರುಗಳ ಹಿಂದೆ,
ಕಾರುಗಳೊಳಗೆ,
ದೂರದರ್ಶನದ ಎದುರಿಗೆ,

ಮತ್ತೆ,
ಹೊರಳಿ ನೋಡಿದಾಗ :
ಧೂರ್ತ ಇತಿಹಾಸದಕ್ಷರಗಳಲ್ಲಿಯ
ವೀರಾದಿವೀರರ ಮಗ್ಗುಲು,
ಹೀಗೆ ಎಲ್ಲೆಲ್ಲೂ ಬುರ್ಖಾಗಳು.

ಕಪ್ಪು ಬುರ್ಖಾಗಳು–ಪ್ರತಿಭಟನೆಯಿಲ್ಲ.
ಕೆಂಪು ಬುರ್ಖಾಗಳು–ಕ್ರಾಂತಿಯಿಲ್ಲ.
ಹಸಿರು ಬುರ್ಖಾಗಳು–ದಾರಿ ಸುಗಮವಿಲ್ಲ.

ಹೀಗೇ ಹೀಗೇ ಸಾಗುತ್ತಲೇ ಇವೆ
ಬೇಸರವಿಲ್ಲದೆ–ಬೇಸರ ತೋರಿಸದೆ
ನೋವಿನಲ್ಲೂ ನಗುತ್ತ–ಅದಕ್ಕೇ ಹೊಂದಿಕೊಳ್ಳುತ್ತ.

ಒಂದಲ್ಲ ಎರಡಲ್ಲ
ಹಲವು ಹದಿನೆಂಟು ರೀತಿಯ ಅಂಜಿಕೆ ಹೊತ್ತ,
ಗಂಡನ ಮಾನ ಮುಚ್ಚಿದ,
ಒಳಗೊಳಗೇ ಹೊಲಸಾದ,
ಏನೊಂದೂ ತಿಳಿಸದ,
ಏನೊಂದೂ ತಿಳಿಯದ,
ಕುಬಿ ಕುಬಿ ಕೊಬ್ಬಿಹೋದ,
ಮುದಿ ಮುದಿ ಮುದ್ದೆಯಾದ,
ಹೀಗೇ ಹೀಗೇ
ಎಲ್ಲಾ ನಮೂನೆಯ ಬುರ್ಖಾಗಳು,
ಕ್ಷಯದ ಆಗರಗಳು
ಶತ ಶತಮಾನಗಳಿಂದಲೂ
ಸಾಗುತ್ತಲೇ ಇವೆ.
ಸಾಗುತ್ತಲೇ ಇವೆ.

ಹುಸಿ

೧

ರಾತ್ರಿ
ಒಂದು ಗಂಟೆ
ಕ್ಲಬ್ಬಿನಂಗಳದಿಂದ
ಕಾರು
ಮೈ ಮುರಿದು
ಹೊರ ಬರುವಾಗ.

ಇಂಪಾಲಾದಿಂದ ಇಳಿದು
ಕರೆಗಂಟೆಗೆ ಕೈ ಹಾಕುವ ಮುನ್ನ
ಕಾಮಿನಿಯ ಕೈಗಳಿಂದ ಬಾಗಿಲು ತೆರೆಯುವಿಕೆ.

ಮೌನ.
ಚಳಿಯೆನಿಸಿತು.

ನಸು ನಕ್ಕೆ.
ಹುಸಿ ನಕ್ಕಳು.

ಚಳಿ ತುಂಬ ಚಳಿ.
ಉಟ್ಟ ಸೂಟಿನ ಮೇಲೆ
ಹಾಯಾಗಿ ನಿದ್ರಿಸಿದೆ
"ಪ್ರಿಯದರ್ಶಿನಿ ರಗ್ಗು" ಹೊದ್ದು.

೨

ಬೆಳಗು...
ನಗೆಗಿರಣಗಳು ಮನೆ ತುಂಬ.
ಹನಿ ಮುತ್ತುಗಳು
ಕಿಟಕಿಯಾಚೆ ಹೊರಳಿದ ಗುಲಾಬಿ ತುಂಬ.

ರಗ್ಗು !
ಕಾಣಲಿಲ್ಲ !!
“ಎಲ್ಲಿ ಪ್ರಿಯೆ” ಎಂದೆ
“ಡ್ರೈವರ್ ಚಳಿಯಲ್ಲಿ ನಡುಗುತ್ತಿದ್ದ
ಕೊಟ್ಟೆ”
ಎಂದಳಾ ಮಾನವ ಪ್ರೇಮಿ.

ಹುಸಿ ನಕ್ಕೆ.
ನಸು ನಕ್ಕಳು.

● ●

ಬಸವಿ

ನೀನು ಬಸವ.
ನಾನು ಬಸವಿ.

ನಮ್ಮಂತರ
ನದಿಯ ದಂಡೆಗಳಷ್ಟು.

ಆದರೂ
ಒಂದೇ ನೀರಿನವರು.

ನಾ
ದೇವದಾಸಿ.

ಬರುತ್ತಿದ್ದಾರೆ ಪೂಜಾರಿಗಳು
"ಬಸವಿ, ದೇವದಾಸಿ
ಸೇವೆ ಬೇಕು, ಸೇವೆ ಬೇಕು"
ಎನ್ನುತ್ತ.

ನೀ
ದೇವದಾಸ.

ಹೋಗುತ್ತಿರುವಿ
ಮನಬಂದಲ್ಲಿ
'ಹಸರ'ನ್ನೆಲ್ಲ ಮೆಯ್ಯುತ್ತ.

ನೀ ಹೋಗಲ್ಲಿ
ಬೀದಿ ದನಗಳು ಬಂದರೆ
ಕೊಂಡವಾಡಿಯೇ ಗತಿ.

ನಿನಗೆ
ಯಾರೂ ಕೇಳುವುದಿಲ್ಲ
ಲಿಂಗ ಮುದ್ರೆಯೊತ್ತಿದೆ
ನೀ ಶ್ರೇಷ್ಠ.

● ●

ಸಾವೇ !

ಸಾವೇ !
ನಿನ್ನ ನೆನಪಾದಾಗಲೆಲ್ಲ
ಬೆಳೆಯುವ ಮಕ್ಕಳು
ಹಸಿರೊಡೆಯುವ ಚಿಗುರೆಲೆಗಳು
ನೆನಪಾಗುತ್ತವೆ.

ಸಾವೇ !
ನಿನ್ನ ನೆನಪಾದಾಗಲೆಲ್ಲ
ಪೃಥ್ವಿಯ ಪ್ರತಿಭಾಗವೂ
ಸುಂದರವಾಗಿ ಕಾಣುತ್ತದೆ.
ಪ್ರತಿಕ್ಷಣವೂ ಮಹತ್ವದ್ದೆನಿಸುತ್ತದೆ.

ಸಾವೇ !
ನಿನ್ನ ನೆನಪಾದಾಗಲೆಲ್ಲ
ತಾರಾಮಂಡಲದ ತುಂಬ ಸುಳಿದಾಡುವ
ಜನರ ಕನಸುಗಳನ್ನೆಲ್ಲ ಹಿಡಿಹಿಡಿದು
ಭೂಮಿಗೆ ತರಬೇಕೆನ್ನಿಸುತ್ತದೆ.

ಸಾವೇ !
ನಿನ್ನ ನೆನಪಾದಾಗಲೆಲ್ಲ
ಅಸಮಾನತೆಯ ಪ್ರತಿಪಾದಿಸುತ್ತ
ಕೊಲ್ಲುವ ವಿಷಾತ್ಮರನ್ನೆಲ್ಲ ಕಲೆಹಾಕಿ
ನಿನ್ನ ಕೈಯಲ್ಲಿ ಕೊಡಬೇಕೆನ್ನಿಸುತ್ತದೆ.

ಸಾವೇ !
ನಿನ್ನ ನೆನಪಾದಾಗಲೆಲ್ಲ
ವಿಶ್ವದ ಮದ್ದು ಗುಂಡುಗಳನೆಲ್ಲ
ಎಂದೆಂದಿಗೂ ಹೊರ ಬರದಂತೆ ಹೂತು
ಹೊಸ ಯುಗವ ಹುಟ್ಟಿಸಬೇಕೆನ್ನಿಸುತ್ತದೆ.

• •

ಬಲೆಗಾರ

ನನ್ನ ವಿಚಾರಗಳು
ಉನ್ಮಾದಕ್ಕೆ ಬೆಂಕಿಯಿಡುವಂತೆ,
ಸೂರ್ಯ
ಒಂದು ಸಂಜೆ, ಕ್ಷಣ ಹೊತ್ತು
ನೀರಿಗೆಲ್ಲ ಬೆಂಕಿ ಹಚ್ಚಿದ್ದನ್ನು
ಕಂಡೆ.

ಸುಳ್ಳು ದೇವತೆಗಳ ಬಣ್ಣ ಬಯಲಿಗೆಳೆಯುತ್ತ
ಆಕಾಶ ಊಸರವಳ್ಳಿಯಾಯಿತು.

ದಿನವಿಡೀ ದುಡಿದು ಮರಳುವಾಗ
ಹಳ್ಳಿಯ ಗಂಡಸರು–ಹೆಂಗಸರು
ಕೆರೆ ದಂಡೆಗುಂಟ ಮಾತು ಬಿಚ್ಚುತ್ತಿದ್ದರು.

ಅಲ್ಲಲ್ಲಿ ಮೋಡಗಳ ಮಿಂಚುನಗೆ
ತಾರೆಗಳ ತರಳೆ ನೋಟ.

ಕತ್ತಲೆ

ಕಪ್ಪೆಗಳ ಭಯಂಕರ ವಟಗುಟ್ಟುವಿಕೆ
ಯುದ್ಧದ ಮುನ್ನಾದಿನದ ಸೈನಿಕರ ಮನದಂತೆ !

ಇವೆಲ್ಲವುಗಳ ಮಧ್ಯ
ಏನೊಂದೂ ಲಕ್ಷಿಸದೆ,

ಸೃಷ್ಟಿ ವಿನ್ಯಾಸದಲ್ಲಿ ಒಂದಾಗಿ,
ಮೀನುಗಳೆಡೆಗೆ ಬಲೆ ಬೀಸುವುದರಲ್ಲಿ
ಮಗ್ನನಾಗಿದ್ದ ಜಲಗಾರ
ಅರ್ಥಪೂರ್ಣವಾಗಿ ಕಂಡ.

• •

ನನ್ನ....

ನನ್ನ
ಆತ್ಮದಲ್ಲೊಂದು ಮಿಡಿಯುತ್ತಿರುವ
ಕೋಮಲ ಗೋರಿಯಿದೆ.

ಅದರ ಮೇಲೆ ಅರಳಿದ ಗುಲಾಬಿ
ನನ್ನನ್ನೇ ನೋಡುತ್ತಿತ್ತು.

ಅಂತೆಯೆ
ತಂದಿಟ್ಟುಕೊಂಡೆ.

• •

ಭಗ್ನ ಹೃದಯಿ

ಸತ್ತಿದೆ ಬದುಕು.
ಜೀವಂತಿದೆ ಸಾವು.
ನಡುವೆ ಹಾರುತ್ತಿದೆ
ಗತಪಕ್ಷಿ.

• •

ಶಾಂತಿ

ಶಾಂತಿ
ಯಾರು ಗೊತ್ತೆ ?

ಯುದ್ಧದ್ವೇಷದ ಕರಗವ ಹೊತ್ತ
ಡಾವರ ಡಾಕಿನಿ.

ಈ ಹಟಮಾರಿ
ತನಗೆ ನ್ಯಾಯ ಸಿಗುವವರೆಗೆ
ಹೀಗೇ ನಿಲ್ಲುತ್ತಾಳೆ
ವರ್ಗಸಮರ ಬೆಳೆಸುತ್ತ.

• •

ಕವಿ

ಗೆಳೆಯಾ
ನಾ ಸುಖಿ
ಎಂದು ತಿಳಿದೆಯಾ !

ಮನುಷ್ಯನ ಬಗೆಗಿರುವ
ತೀರಾ ಕೋಮಲ ಭಾವನೆಯಿಂದಾಗಿ
ನ್ನೈ ತುಂಬ ತಾಪಜ್ವಾಲೆಗಳುಂಟು.

ಹೊರಗೆ ವಿಷ ಮಂಡಲ.
ಒಳಗೆ ವ್ಯಥೆ ಕುಂಡಲ.

ಆದರೂ
ಮನಸ್ಸು : ನಾಗಸ್ವರ.

• •

ಮೇಡಂ ನೀವೇ ಹೇಳಿ

ಹಲೋ ಮೇಡಂ ಚೆನ್ನಾಗಿದ್ದೀರಾ ?
ನಿಮ್ಮ ನಾಯಿ ಬ್ರೆಡ್ ತಿನ್ನುತ್ತದೆಯೆ ?
ಕಾರು ಸರಿಯಾಗಿ ಚಲಿಸುತ್ತಿರುವುದಲ್ಲವೆ ?
ಹೊಸ ಮನೆಗೆ ಹೋಗಿ ಆಯಿತಾ ?

"ಇದೇನು ಪ್ರಶ್ನೆಗಳ ಸುರಿಮಳೆ" ಎಂದು ಭಾವಿಸಿದಿರಾ ?
ಛೇ !
ಹಾಗೇನೂ ತಪ್ಪು ತಿಳಿಯಬೇಡಿ
ಇದು ಪ್ರಶ್ನೆಗಳ ಸುರಿಮಳೆ ಅಲ್ಲ
'ಶುದ್ಧ ಕವನ'
ಯಾವ ರಾಜಕೀಯಕ್ಕೂ ಸಂಬಂಧಿಸಿದುದಲ್ಲ.

ನಿಮ್ಮ ಮನೆಕಟ್ಟುವವರ ಬಗ್ಗೆ,
ಮನೆಗೆಲಸದವರ ಬಗ್ಗೆ,
ನಿಮ್ಮ ನಲ್ಲಿಗೆ ನೀರು ಬಿಡುವವರ,
ನಿಮ್ಮನೆಗೆ ಹಾಲು ತರುವವರ,
ನಿಮ್ಮ ಕಾರನ್ನು ರಿಪೇರಿ ಮಾಡುವವರ,
ಹಗಲೂ ರಾತ್ರೀ ದುಡಿದು
ನಿಮ್ಮ 'ಶುದ್ಧ ಸಾಹಿತ್ಯ'ವನ್ನೆಲ್ಲ
ಪುಸ್ತಕ ರೂಪಕ್ಕೆ ತರಲು ಶ್ರಮಿಸುವವರ,
ನಿಮ್ಮ ಸೀರೆ ನೇಯುವವರ......,
ಇಂತೀ ಇಂತೀ ನಿಮಗಾಗಿ ದುಡಿಯುವ

ನನ್ನ ಜನರ ಬಗ್ಗೆ
ನಾನೆಂದೂ ಬರೆಯುವದಿಲ್ಲ.
ಏಕೆಂದರೆ
ಆಗ 'ವರ್ಗಪ್ರಜ್ಞೆ' ಅಡ್ಡಬಂದು,
ರಾಜಕೀಯ ಸೇರಿ,
ಈ ನನ್ನ 'ಶುದ್ಧ ಕವನ'
ಅಶುದ್ಧವಾಗುತ್ತದೆ.
ಅಹುದೊ ? ಅಲ್ಲವೊ ?
ನೀವೇ ಹೇಳಿ ನೋಡಂ !
"ಆದರೂ ರಾಜಕೀಯ ಬರುತ್ತದೆ" ಎಂದು ಹೇಳುತ್ತೀರಾ?

ಹಾಗಾದರೆ ಏನು ಮಾಡಲಿ ?
"ಹಾಗೇ ನಡೆದರೆ ಹೊರಟಲ್ಲಿಗೇ ಬರುತ್ತಾರೆ"
ಎಂದು ಹೇಳುತ್ತಾರೆ.
ಅಲ್ಲಿಯವರೆಗೆ ಸುಮ್ಮನಿರಲೆ ?
ಆಗ,
ಮನುಷ್ಯರು ಹೊರಟಲ್ಲಿಗೇ ಬಂದಾಗ,
ಯಾವ ರಾಜಕೀಯವೂ ಇರುವುದಿಲ್ಲ.
ಅವರ ಮೈತುಂಬ ಕೂದಲು,
ಕೈತುಂಬ ಕಲ್ಲುಗಳು,
ಬಾಯಿ ತುಂಬ ಹಸಿ ಮಾಂಸ......
ನಿಜ ನೋಡಂ
ಆಗ ಯಾವ ರಾಜಕೀಯವೂ ಇರುವುದಿಲ್ಲ.

ಅಂತೆಯೆ
ಆ ದಿನಗಳು 'ಶುದ್ಧ ಕವನ'ದ ಸುಗ್ಗಿಯ ದಿನಗಳು
ಹಾಗಾದರೆ ನೀವೇ ಹೇಳಿ ನೋಡಂ
ನಾನೇನು ಮಾಡಲಿ ?

• •

→

ಈತ ಬೀದಿಯಲ್ಲಿ ಸಾಗುತ್ತ ಐತಿಹಾಸಿಕ ಪ್ರಜ್ಞೆಯಿಂದ ಕಾಲವನ್ನು ಹಿಂದೆ ನೂಕುತ್ತಾನೆ. ರಾಜಕೀಯ ಪ್ರಜ್ಞೆಯಿಂದ ಎದೆಯಲ್ಲಿ ಬೆಂಕಿ ಹಚ್ಚುತ್ತಾನೆ. ತನ್ನ ಮಾನವತಾವಾದದಿಂದ ಆತ್ಮದಲ್ಲಿಯ ಗೋರಿಯನ್ನೂ ಮಿಡಿಯುವಂತೆ ಮಾಡುತ್ತಾನೆ. ದುಃಖ ಹಾಗೂ ಸಾವುಗಳಂಥ ಅಮೂರ್ತ ಭಾವಗಳಲ್ಲಿ ಜೀವ ತುಂಬಿ ಸೌಂದರ್ಯಮಯವಾಗಿಸುವಲ್ಲಿ ಈತನ ಸಮಸ್ತ ಸಾಮರ್ಥ್ಯ, ಬದುಕಬೇಕೆಂದು ಸಾಯುತ್ತ ಸಾಗುವಲ್ಲಿ ನಮ್ಮ-ನಿಮ್ಮಂಥವರ ಅಸಹಾಯಕ ದೌರ್ಬಲ್ಯ ಕಂಡೀತು. ತಾನು ನಂಬಿಕೊಂಡಿರುವ ಸಿದ್ಧಾಂತವನ್ನು 'ತೀವ್ರವಾಗಿ ಬದುಕುತ್ತಾನಾದ್ದರಿಂದ' ಅಲ್ಲಲ್ಲಿ ತನ್ನ ಒಟ್ಟಾರೆ ನಿಲುವಿನಲ್ಲಿ ಏಕತಾನತೆಯ ಭ್ರಮೆ ಹುಟ್ಟಿಸಿದರೂ ತನ್ನ ಲೆಕ್ಕಣಿಕೆಯ ತುದಿಯಿಂದ ಗ್ಲೋಬನ್ನು ಗಿರ್ರನೆ ತಿರುಗಿಸುತ್ತ, ಸಾರ್ತ್ರನನ್ನು ಭೇಟಿ ಮಾಡಿಸಿ, ಮಾರ್ಕ್ಸ್ – ಲೆನಿನ್ನರೊಂದಿಗೆ ಕೈಕೊಡಿಸಿ, ಇಡೀ ಪೃಥ್ವಿಯನ್ನು ಪ್ಯಾಲೆಸ್ತಾನ್ ಎಂದು ಕರೆಯುವ ಬೆದರಿಕೆ ಹಾಕಿ ಥಟ್ಟನೆ ಉಳ್ಳಾಗಡ್ಡಿ ಓಣಿಯಲ್ಲಿ ಪರಿಬಿಚ್ಚುವ ಮಗಳನ್ನು ನೆನೆದು ಮತ್ತೆ ಬೀದಿಯಲ್ಲಿ ಬಂದು ನಿಲ್ಲುತ್ತಾನೆ, ನಮ್ಮನ್ನೂ ಎಳೆದು ತರುತ್ತಾನೆ.

ಮನುಷ್ಯರ ಬಗೆಗಿರುವ ತೀರ ಕೋಮಲ ಭಾವನೆಗಳಿಂದಾಗಿ, ಕೆಂಡದಂತಿರುವ ಕವನಗಳನ್ನು ಬೊಗಸೆಯಲ್ಲಿ ತುಂಬಿಕೊಂಡು ನಮ್ಮ ನಿಮ್ಮೆಲ್ಲರ ಮಧ್ಯ ತನ್ನ ಅಸ್ತಿತ್ವ ತಡಕಾಡುತ್ತ ಈಗ ಬೀದಿಗಿಳಿದು ಕೇಳುತ್ತಿದ್ದಾನೆ. 'ನೀವು ಕಂಡಿರಾ, ನೀವು ಕಂಡಿರಾ'.

ಹೌದು, ನೀವು ಕಂಡಿರಾ ?

—ರಮೇಶ ಥಾನವಾಡಕರ

ಸಾಮಾಜಿಕ ವಸ್ತುಸ್ಥಿತಿಯನ್ನು ಪ್ರತಿಬಿಂಬಿಸುವುದರ ಜೊತೆಗೇ ಕಾವ್ಯ ಕವಿ ಪ್ರತಿನಿಧಿಸುವ ವರ್ಗ ಮನೋಭಾವವನ್ನು ಸೂಚಿಸುತ್ತದೆ. ಬಹಳವಾಗಿ, ಕೆಲವೊಂದು ಐತಿಹಾಸಿಕ ಸಂದರ್ಭಗಳನ್ನು ಬಿಟ್ಟರೆ, ಕನ್ನಡ ಕಾವ್ಯ ಆಳುವ ಉಚ್ಚ ವರ್ಗ-ವರ್ಣಗಳ ಧ್ವನಿಯಾಗಿದ್ದು ಈಗೀಗ ಮಾತ್ರ ಅದು ಹೊಸ ಆಯಾಮವನ್ನು ಪಡೆಯುತ್ತಿದೆ. ಸಾವಿರಾರು ವರ್ಷಗಳಿಂದ ದಬ್ಬಾಳಿಕೆ, ಹಿಂಸೆ, ಅನ್ಯಾಯ, ಶೋಷಣೆಗೀಡಾದ ಕೋಟಿ ಕೋಟಿ ಜನರ ಧ್ವನಿಯಾಗುತ್ತ ಕ್ರಾಂತಿಯೊಂದರ ಅವಶ್ಯಕತೆಯನ್ನು ಇಂದಿನ ತರುಣ ಕವಿಗಳು ಪ್ರತಿಬಿಂಬಿಸುತ್ತಿದ್ದಾರೆ.

ರಮಜಾನ ದರ್ಗಾ ಅವರ ಈ ಸಂಕಲನದ ಕವಿತೆಗಳು ಹೊಸ ಕಾವ್ಯ ಧೋರಣೆಗೆ ಹಿಡಿದ ಕನ್ನಡಿಯಂತಿವೆ. ಹೃದಯಗಳಿಗೆ ಬೆಂಕಿ ಹಚ್ಚುವ ಕವಿತೆಗಳಿವು. ಈ ಬೆಂಕಿ ಒಣರೊಚ್ಚಿನಿಂದ ಉರಿಯುವ ಬೆಂಕಿಯಲ್ಲ. ಕಂಡುಂಡ ನೋವು ವಿಷಾದಗಳನ್ನು ಕೇವಲ ಸ್ವಂತದ ವ್ಯಥೆಯ ಕಕ್ಕುವಿಕೆಗೆ ವಿಷಯವಾಗಿಸಿಕೊಳ್ಳದೆ, ಅಂಥ ವಿಷಾದ, ನೋವುಗಳ ಮೂಲವನ್ನೇ ಕೆದಕಿ ತನ್ಮೂಲಕ ಸಾಮಾಜಿಕ ವಿಷಮತೆಯತ್ತ ಕಣ್ಣಿಟ್ಟು ನೋಡಿ, ವಿಶ್ಲೇಷಿಸಿ, ಉರಿಯುತ್ತಿರುವ ಹೃದಯಗಳ ಬೆಂಕಿಯನ್ನು ತನ್ನ ಹೃದಯದ ಬೆಂಕಿಯ ಜೊತೆಗೆ ಮೇಳವಿಸಿಕೊಂಡು ಅವರು ಬರೆಯುವುದರಿಂದ ಸಾವಿರ ಸಾವಿರ ಹೃದಯಗಳಿಗೆ ಮತ್ತೆ ಅದನ್ನು ತಾಗಿಸುವ ಸಾಮರ್ಥ್ಯ ಈ ಕವಿತೆಗಳಿಗೆ ಬಂದಿದೆ. ಕೇವಲ ಕೂಗಾಟವಾಗದೆ, ವಾಚ್ಯಕ್ಕಿಳಿಯದೆ ಕಲಾತ್ಮಕತೆಯನ್ನು ಬಿಟ್ಟುಕೊಡದೆ, ಕಲಾತ್ಮಕತೆಗೇ ಬಲಿ ಬೀಳದೆ, ಈ ಕವನಗಳು ಅರ್ಥಪೂರ್ಣವಾಗಿ ಸಂವಹನದಲ್ಲಿ ಸಫಲವಾಗುತ್ತವೆ.

ವೈಜ್ಞಾನಿಕವಾದ ಕ್ರಾಂತಿಕಾರಿ ಸಿದ್ಧಾಂತವೊಂದರಲ್ಲಿನ ಅವರ ಅಚಲ ವಿಶ್ವಾಸ ಅವರ ಕಾವ್ಯದ ಜೀವನ ಸತ್ವವೂ ಆಗಿದೆ. ಅಂತೆಯೆ ಇಲ್ಲಿಯ ಬಹಳಷ್ಟು ಕವನಗಳು ವಸ್ತುಸ್ಥಿತಿಯ ನೈಜ ಪ್ರತಿಬಿಂಬವನ್ನೊದಗಿಸಿ ಓದುಗನಿಗೆ ಗುಂಗುಹಿಡಿಸಿ ವಿಚಾರಕ್ಕೆ ಹಚ್ಚುತ್ತವೆ. ಒಳ್ಳೆಯ ಕಾವ್ಯ ಮಾಡಲೇಬೇಕಾದ ಕಾರ್ಯವಿದು.

— ಜಗದೀಶ ಮಂಗಳೂರಮಠ